ದಿನಾಂಕಃ 17.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃವಾದಿ ಪರ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ಆಧರ್ ಕಾರ್ಡ್, ಮತ್ತು ಓಟರ್ ಐಡಿ ಮತ್ತು ಹತ್ತನೇ ತರಗತಿಯ ಅಂಕಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ತಂದೆಯವರಿಗೆ ಒಟ್ಟು 7 ಜನ ಮಕ್ಕಳು, ಈಗ ನಾನು ಮತ್ತು ನನ್ನ ತಂಗಿ ಇದ್ದೇವೆ. ಲಕ್ಷ್ಮಮ್ಮ ನನ್ನ ಅಣ್ಣನ ಹೆಂಡತಿ. ನನ್ನ ತಂದೆಯ ಹೆಸರು  ಲಕ್ಷ್ಮೀನರಸಿಂಹದಾಸಯ್ಯ  ಅಲಿಯಾಸ್ ಲಕ್ಷ್ಮೀನರಸಿಂಹಯ್ಯ. ಗೋವಿಂದಪ್ಪ ನನ್ನ ಅಣ್ಣ ಎಂದರೆ ಸರಿ. ಯಲದಬಾಗಿ ಗ್ರಾಮದಲ್ಲಿ ಲಕ್ಷ್ಮೀನರಸಿಂಹದಾಸಯ್ಯ ಅಲಿಯಾಸ್ ಲಕ್ಷ್ಮೀನರಸಿಂಹಯ್ಯ ಎಂಬ ಹೆಸರುಳ್ಳ ಬೇರೆ ವ್ಯಕ್ತಿ ಯಾರೂ ಇಲ್ಲ ಎಂದರೆ ಸರಿ. ನಿಡಿ-1 ರಲ್ಲಿ 2 ನೇ ಪ್ರತಿವಾದಿ ಲಕ್ಷ್ಮಮ್ಮ ರವರ ಹೆಸರು ಹಾಗೂ ನನ್ನ ಹೆಸರು ಇದೆ ಎಂದರೆ ಸರಿ. ನನ್ನ ತಂದೆಯವರು ಜೀವಂತವಾಗಿದ್ದಾಗ ಅವರಿಗೆ ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿಯು 4 ಎಕರೆ ಜಮೀನು ಮತ್ತು ನಿಡಿ-1 ರಲ್ಲಿರುವ ಮನೆಗಳು ಇದ್ದವು ಎಂದು ನುಡಿದಿರುತ್ತಾರೆ. ಕಾನೇಶುಮಾರಿ ನಂ.25 ಆದ ದಾವಾ ಸ್ವತ್ತು ನಮ್ಮ ಮೊದಲು ನಮ್ಮ ತಂದೆಗೆ ಸೇರಿತ್ತು ಎಂದರೆ ಸರಿ. ದಾವಾ ಸ್ವತ್ತಿನ ವಿಸ್ತೀರ್ಣ (6 ಗಜ ) 18 ಅಡಿ X 30 ಅಡಿ (10 ಗಜ ) ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 30X40 ಅಡಿ ಇದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕು ಬಂಧಿ ಪೂರ್ವ ಮತ್ತು ಪಶ್ಚಿಮಕ್ಕೆ ಖಾಲಿ ಸೈಟ್, ಉತ್ತರ ಮತ್ತು ದಕ್ಷಿಣಕ್ಕೆ ದಾರಿ ಇದೆ ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಂದೆ ವಾದಿಗೆ  ದಿಃ13.11.1980 ರಂದು ಕ್ರಯಕ್ಕೆ ಮಾರಾಟ ಮಾಡಿದರು ಹಾಗೂ ಸ್ವಾಧೀನ ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ವಾದಿಯ ಹೆಸರು ತೋರಿಯಮ್ಮ ಅಲಿಯಾಸ್ ಕೊರಿಯಮ್ಮ ಎಂದರೆ ನನಗೆ ಗೊತ್ತಿಲ್ಲ. ಅವರು ನಮ್ಮ ಊರಿನವರು ಎಂದರೆ ಸಾಕ್ಷಿಯು ಅವರು ಕುಂಟೆಗೌಡನಹಳ್ಳಿಯವರು ಎಂದು ನುಡಿದಿರುತ್ತಾರೆ. ವಾದಿಯ ಹೆಸರಿಗೆ ಖಾತೆ ಬದಲಾವಣೆ ಸಹ ಆಗಿದೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಲ್ಲಿ ನರಸಿಂಹದಾಸಯ್ಯ ಎಂದು  ನಮೂದಾಗಿರುವ ಹೆಸರು ನನ್ನ ತಂದೆಯದು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಹೆಸರು ಲಕ್ಷ್ಮೀನರಸಿಂಹಯ್ಯ ಎಂದು ನುಡಿದಿರುತ್ತಾರೆ. ನನ್ನ ತಂದೆಯವರು ಒಂದು ಸೈಟನ್ನು ತೆಗೆದುಕೊಂಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಬಳಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಸಹಿ ಮಾಡಿರುವ ದಾಖಲೆಗಳು ನಮ್ಮ ಮನೆಯಲ್ಲಿ ಇವೆ ಎಂದರೆ ಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ತಂದೆಯವರು ವಾದಿಗೆ ಕ್ರಯ ಮಾಡಿದ್ದರೂ

ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಾಖಲೆಗಳು ನನ್ನ ತಂದೆಯ ಹೆಸರಿನಿಂದ ವಾದಿಯ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಾಖಲೆಗಳ ವಿರುದ್ದ ನಾನು ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. PW-2 ಮತ್ತು ನನಗೆ ಯಾವುದೇ ದ್ವೇಶ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.